ಕನ್ನಡ ವಿಮರ್ಶಾ ವಿವೇಕದ ಸಾಧ್ಯತೆಗಳನ್ನು ವಿಸ್ತರಿಸಿದ ಹಾಗೂ ವಿಮರ್ಶೆಗೆ ಘನತೆ ತಂದುಕೊಟ್ಟ ಬಹು ಮುಖ್ಯ ಬರಹಗಾರರಲ್ಲಿ ಓ.ಎಲ್. ನಾಗಭೂಷಣ ಸ್ವಾಮಿ (ಸೆ. 23, 1953) ಒಬ್ಬರು. ವಿಮರ್ಶೆಯಂತೆಯೇ ಕಾವ್ಯ ಹಾಗೂ ಅನುವಾದಗಳನ್ನೂ ಹಚ್ಚಿಕೊಂಡಿರುವ ಓಎಲ್‌ಎನ್ 'ಕನ್ನಡಮೇಷ್ಟ್ರು ಪರಂಪರೆ'ಗೂ ಸಲ್ಲುವವರು. ಹೊಸಕೋಟೆ ಅವರ ಜನ್ಮಸ್ಥಳ, ಮೈಸೂರು ವಿದ್ಯಾಭ್ಯಾಸ ಕೊಟ್ಟ ಸ್ಥಳ. ಇಂಗ್ಲಿಷ್ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿ, ಹಂಪಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ ಭಾಷಾಂತರ, ಕನ್ನಡ ಸಾಹಿತ್ಯ ಮತ್ತು ಭಾಷೆ ವಿಭಾಗಗಳಲ್ಲಿ ಪ್ರಾಧ್ಯಾಪಕರಾಗಿ ಹಾಗೂ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. 'ನಕ್ಷತ್ರಗಳು' ಪ್ರಕಟಿತ ಕವನ ಸಂಕಲನ. 'ವಿಮರ್ಶೆಯ ಪರಿಭಾಷೆ', 'ಪ್ರಜ್ಞಾಪ್ರವಾಹ ತಂತ್ರ', 'ಇಂದಿನ ಹೆಜ್ಜೆ', 'ಮತ್ತೆ ತೆರೆದ ಬಾಗಿಲು' ಪ್ರಮುಖ ವಿಮರ್ಶಾ ಕೃತಿಗಳು. 'ನುಡಿಯೊಳಗಾಗಿ' (ಭಾಷೆ), 'ನನ್ನ ಹಿಮಾಲಯ' (ಪ್ರವಾಸ ಕಥನ,) 'ನಮ್ಮ ಕನ್ನಡ ಕಾವ್ಯ' (ಸಂಪಾದನೆ), 'ಅಲ್ಲಮ ವಚನ ಸಂಗ್ರಹ' ಹಾಗೂ 'ತತ್ವಪದಗಳು' (ಪ್ರಾತಿನಿಧಿಕ ಸಂಕಲನ) ಕೆಲವು ಪ್ರಮುಖ ಕೃತಿಗಳು. ಅವರ ಅನುವಾದಿತ ಕೃತಿಶ್ರೇಣಿಯಲ್ಲಿ 'ಯುದ್ಧ ಮತ್ತು ಶಾಂತಿ' (ಟಾಲ್‌ಸ್ಟಾಯ್), 'ಅಕ್ಕ ತಂಗಿಯರು' (ಚೆಕಾವ್), 'ಕನ್ನಡಕ್ಕೆ ಬಂದ ಕವಿತೆ' (ಬೇರೆ ಭಾಷೆಗಳಿಂದ ಆಯ್ದ ಕವಿತೆಗಳ ಅನುವಾದ), 'ಯುವ ಕವಿಗೆ ಬರೆದ ಪತ್ರಗಳು' (ರಿಲ್ಕೆ) ಸೇರಿದಂತೆ ವಿಶ್ವಸಾಹಿತ್ಯ ಹಲವು ಪ್ರಮುಖ ಪುಸ್ತಕಗಳಿವೆ. ಜೆ. ಕೃಷ್ಣಮೂರ್ತಿ ಅವರ ಜನಪ್ರಿಯ ಕೃತಿಗಳನ್ನು ಕನ್ನಡಕ್ಕೆ ಪರಿಚಯಿಸಿದ್ದಾರೆ. ಚಂದ್ರಶೇಖರ ಕಂಬಾರ, ಜೆ.ಎಸ್. ಶಿವರುದ್ರಪ್ಪ ಮತ್ತು ಬೆಳಗೆರೆ ಕೃಷ್ಣಶಾಸ್ತ್ರಿಗಳ ಕೃತಿಗಳನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ರಾಜ್ಯೋತ್ಸವ ಪ್ರಶಸ್ತಿ, ಜಿಎಸ್‌ಎಸ್ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಅವರಿಗೆ ಸಂದಿವೆ. ಕನ್ನಡದ ಈ ಮಹತ್ವದ ಬರಹಗಾರರೊಡನೆ 'ಮಯೂರ'ಕ್ಕಾಗಿ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.



## ವಿಮರ್ಶಕ, ಅನುವಾದಕ ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ಸಂದರ್ಶನ

ಚಿತ್ರ: ಆರ್. ದಿಲೀಪ್ ಕುಮಾರ್